No.MAG(3)/NPP/98/2023-2024 No.MAG(3)/NPP/99/2023-2024



ಸ್ಥಾಪನೆ : ೧೯೭೯

# ಹೊಂಗನಸು



ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೦೫

ಸಂಪುಟ: ೧೨ ಸಂಚಿಕೆ: ೫ | Volume: 12 Issue: 5
ಆಗಸ್ಟ್ ೨೦೨೪ | August 2024
ಪುಟಗಳು-೮ | Pages-8
ವಾರ್ಷಿಕ ಚಂದಾ ರೂ.೨೦/- | Annual Subscription Rs.20/-
ಶ್ರೀ ಕ್ರೋಧಿ ಸಂವತ್ಸರ ಆಷಾಢ-ಶ್ರಾವಣ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜೆ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಪಿ.ವಿ. ನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಡಾ. ಬೆಳವಾಡಿ ಕೃ. ಪ್ರಭಾಕರ**
  ೯೪೪೯೪೮೪೯೧೦

**ಸಂಯೋಜನಾಧಿಕಾರಿಗಳು**
**ಶ್ರೀ ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ
**ಡಾ. ಚಿತ್ತಯ್ಯ ಪೂಜಾರ್**
ಎಂ.ವಿ.ಸೀ. ಸಂಶೋಧನಾ ಕೇಂದ್ರ

## ಸಂನುಡಿ

ಪ್ರಿಯ ಓದುಗರೇ,

ಪ್ರತಿಷ್ಠಾನದ ಕಾರ್ಯಕ್ರಮಗಳ ಪ್ರತಿಬಿಂಬ 'ಹೊಂಗನಸು' ತಪ್ಪದೇ ತಮ್ಮ ಕೈಸೇರುತ್ತಿತ್ತು. ಆದರೆ ಅದರ ನೋಂದಣಿಯ ಮುಂದುವರಿಕೆ ದೆಹಲಿ ಕಚೇರಿಯಲ್ಲಿ ಮಂದಗತಿಯಲ್ಲಿ ಸಾಗುತ್ತಿದ್ದು, ಅಲ್ಲಿಯವರೆಗೆ ನಾವು ಅನಿವಾರ್ಯವಾಗಿ ಈ ಹೊತ್ತಿಗೆಯನ್ನು ಅಂತರ್ಜಾಲದ ಮೂಲಕ ತಮಗೆ ತಲುಪಿಸಿದ್ದೇವೆ. ಅನೇಕ ಸದಸ್ಯರಿಗೆ ಇದರಿಂದ ಅನಾನುಕೂಲ ಉಂಟಾಗಿರುವುದು ನಮ್ಮ ಗಮನದಲ್ಲಿ ಖಂಡಿತ ಇದೆ. ನಾವು ಆದಷ್ಟೂ ತೀವ್ರವಾಗಿ ತಮಗೆ ಹೊಂಗನಸು ಭೌತಿಕ ರೂಪದಲ್ಲಿ ದೊರೆಕಿಸುವ ಪ್ರಯತ್ನದಲ್ಲಿ ಇದ್ದೇವೆ. ನಮ್ಮ ಪ್ರಯತ್ನ ಶೀಘ್ರವಾಗಿ ಫಲಪ್ರದವಾಗಲಿ ಎಂದು ಆಶಿಸುತ್ತಿದ್ದೇವೆ. ದಯವಿಟ್ಟು ಈ ಅಡಚಣೆಗೆ ಸಹಕರಿಸಿ..

**ಡಾ. ಬೆಳವಾಡಿ ಕೃ. ಪ್ರಭಾಕರ್**
ಸಂಪಾದಕರು

## ಹಿಂದಿನ ತಿಂಗಳ ಅಂಗಳ

### ನಾಡೋಜ ಕಮಲ ಹಂಪನಾ ನೆನಪು ನಮನ



ದಿನಾಂಕ ೨೮ ಜೂನ್ ೨೦೨೪ ಶುಕ್ರವಾರ, ಇತ್ತೀಚಿಗೆ ಅಗಲಿದ ಸಾಹಿತ್ಯ ದಿಗ್ಗಜ ನಾಡೋಜ ಕಮಲ ಹಂಪನಾ ಇವರ ನಿಧನದ ಪ್ರಯುಕ್ತ ಬಿ.ಎಂ.ಶ್ರೀ. ಪ್ರತಿಷ್ಠಾನ, ಕನ್ನಡ ಸಂಘರ್ಷ ಸಮಿತಿ ಮತ್ತು ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಒಂದುಗೂಡಿ 'ಶ್ರದ್ಧಾಂಜಲಿ' ಏರ್ಪಡಿಸಿತ್ತು.

ಪ್ರಾರಂಭದಲ್ಲಿ ಅಗಲಿದ ನಾಡೋಜ ಕಮಲ ಹಂಪನಾ ಅವರಿಗೆ ಪುಷ್ಪನಮನದ ನಂತರ ಒಂದು ನಿಮಿಷದ ಮೌನದ ಗೌರವ ಸಲ್ಲಿಸಲಾಯಿತು.

ನಿಡುಮಾಮಿಡಿ ಸಂಸ್ಥಾನದ ಪೀಠಾಧ್ಯಕ್ಷರಾದ ಪೂಜ್ಯಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು, ಹಲವಾರು ಸಂಘ ಸಂಸ್ಥೆಗಳ ಗಣ್ಯರಾದ ಶ್ರೀ ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಶ್ರೀ ಸಿ.ಕೆ. ರಾಮೇಗೌಡ, ಡಾ. ಶಾಂತರಾಜು, ಶ್ರೀ ಎ.ಎಸ್. ನಾಗರಾಜಸ್ವಾಮಿ, ಶ್ರೀ ಎಂ. ಪ್ರಕಾಶಮೂರ್ತಿ, ಡಾ. ಬಿ.ಸಿ. ರಾಜಕುಮಾರ್, ಮತ್ತು ಶ್ರೀಮತಿ ಗಾಯತ್ರಿ ರಾಮಣ್ಣ ಇವರುಗಳು ಉಪಸ್ಥಿತರಿದ್ದರು.

ನಾಡೋಜ ಕಮಲ ಹಂಪನಾ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮನ್ನು ತಾವೇ ಕಾಯಾ, ವಾಚಾ, ಮನಸಾ ಸಮರ್ಪಿಸಿಕೊಂಡು ಮಾಡಿದ ಅಗಾಧ ಸೇವೆಯನ್ನು ಸ್ಮರಿಸುತ್ತಾ 'ನುಡಿ ನಮನ' ಸಲ್ಲಿಸಿದರು. ಅವರು ತಮ್ಮ ಪತಿ ಹಂಪನಾ ಅವರೊಡಗೂಡಿ ಜೋಡಿಹಕ್ಕಿಗಳಾಗಿ ಹಾರಾಡುತ್ತಾ ಕನ್ನಡದ ಫಲಯುಕ್ತವಾದ ಭೂಮಿಯಲ್ಲಿ ಉತ್ತಮೋತ್ತಮ ಬೀಜಗಳನ್ನು ಕರ್ನಾಟಕದ ಉದ್ದಗಲಕ್ಕೂ ಬಿತ್ತಿದ್ದನ್ನು ಎಲ್ಲರೂ ನೆನಪಿಸಿಕೊಂಡು, ಇದೊಂದು ಅಪರೂಪದ ಜೋಡಿ ಎಂದರು. ಕಮಲಾ ಅವರ ಕಾಳಜಿ, ನಿಸ್ವಾರ್ಥ ಸೇವೆ ಅವಿಸ್ಮರಣೀಯ ಅನ್ನುವುದರಲ್ಲಿ ಅತಿಶಯೋಕ್ತಿಯಿಲ್ಲವೆಂಬುದು ಪ್ರತಿಯೊಬ್ಬರ ನುಡಿಯಲ್ಲಿ ಎದ್ದು ಕಾಣುತ್ತಿತ್ತು.

ಕಮಲಾ ಅವರ ಅಗಲಿಕೆ ಕನ್ನಡ ಸಾಹಿತ್ಯ ಲೋಕದ ನಕ್ಷೆಯಲ್ಲಿ ತುಂಬಲಾಗದ ಒಂದು ಭಾಗ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು.

ಅನೇಕರು ಕಮಲಾ ಅವರ ಬದುಕು ಬರಹದ ಪುಟಗಳನ್ನು ಅರ್ಥೈಸುತ್ತಾ ಅದರಲ್ಲಿನ ಸಾರ್ಥಕತೆಯನ್ನು ಸ್ಮರಿಸಿದರು.

'ಶ್ರೀಸಾಹಿತ್ಯ' ಪ್ರಶಸ್ತಿ ವಿಜೇತರಾದ ಕಮಲಾ ಅವರ ಸೇವೆ ಅದರಲ್ಲೂ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಬೆನ್ನೆಲುಬಾಗಿ, ಹಿತೈಷಿಗಳಾಗಿ ಮತ್ತು ಮಾರ್ಗದರ್ಶಕರಾಗಿ ಮಾಡಿದ ಸತ್ಕಾರ್ಯ ಪ್ರತಿಷ್ಠಾನದಲ್ಲಿ ಪ್ರತಿಧ್ವನಿಸುತ್ತದೆ ಎಂದು ಹೇಳುತ್ತಾ, ಇನ್ನಿಲ್ಲದ ಆದರೂ ಇರುವ ನಾಡೋಜ ಕಮಲಾ ಹಂಪನಾ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಅವರ ಸೇವೆ ಆ ಕಾಣದ ಜಗತ್ತಿನಲ್ಲಿ ಇನ್ನಷ್ಟು ಇಮ್ಮಡಿಸಲಿ ಎಂದು ಹಾರೈಸೋಣ.

## ಗತ ತಿಂಗಳ ಅಂಗಳ

### ದಿನಾಂಕ ೧೩/೦೭/೨೦೨೪ ಶನಿವಾರ ಸಂಜೆ

### ರಾಸ ಸಾಹಿತ್ಯ ಮತ್ತು ಸಮೇತನಹಳ್ಳಿ ರಾಮರಾವ್, ಪ್ರೊ. ಡಿ. ಲಿಂಗಯ್ಯ, ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಪ್ರೊ. ತೀ. ನಂ. ಶ್ರೀ. ಹಾಗೂ ಶ್ರೀಮತಿ ಶಾರದಮ್ಮ ಹನುಮಯ್ಯ ಇವರುಗಳ ಸಂಯುಕ್ತ ದತ್ತಿ.




ಡಾ. ವತ್ಸಲಾ ಮೋಹನ್ ಮತ್ತು ಡಾ. ಬೈರಮಂಗಲ ರಾಮೇಗೌಡ

ಈ ಸಂಯುಕ್ತ ದತ್ತಿ ಅಡಿಯಲ್ಲಿ ಸ್ವಾಯತ್ತ ಸುರಾನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ವತ್ಸಲಾ ಮೋಹನ್ ಅವರು 'ಕನ್ನಡ ಸಾಹಿತ್ಯಕ್ಕೆ ಸಮೇತನಹಳ್ಳಿ ರಾಮರಾಯರ ಕೊಡುಗೆ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ಡಾ. ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು.

ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ. ಎಸ್. ಗುರುಪ್ರಸಾದ್ ಅವರು ಎಲ್ಲಾ ದತ್ತಿ ದಾನಿಗಳ ಬಗ್ಗೆ ಪರಿಚಯ ಮಾಡಿಸಿ, ಅವರುಗಳು ಪ್ರತಿಷ್ಠಾನದಲ್ಲಿ ಈ ದತ್ತಿಗಳನ್ನು ಸ್ಥಾಪಿಸಿದ ಮತ್ತು ಅವುಗಳು ನಡೆದುಬಂದ ವಿವರಗಳನ್ನು ಸಭೆಗೆ ತಿಳಿಸಿದರು. ಅನೇಕ ವರ್ಷಗಳ ಹಿಂದೆ ಸ್ಥಾಪಿಸಿದ ಈ ದತ್ತಿಗಳ ಮೌಲ್ಯ ಅಂದಿಗೆ ಉಪಯುಕ್ತ ಮೊತ್ತವಾಗಿದ್ದರೂ, ಇಂದಿಗೆ ಅವುಗಳಿಂದ ಹೊಮ್ಮುವ ಆದಾಯ ಕಡಿಮೆಯಾದ್ದರಿಂದ ಅನಿವಾರ್ಯವಾಗಿ ಎಲ್ಲವನ್ನೂ ಸೇರಿಸಿ ಈಗ ಸಂಯೋಜಿತ ದತ್ತಿ ಏರ್ಪಡಿಸಲಾಗುತ್ತಿದೆ ಎಂಬ ವಿಷಯವನ್ನು ಸಭಿಕರ ಗಮನಕ್ಕೆ ತಂದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಸ್ವಾಗತ ಕೋರುವುದರ ಜೊತೆಗೆ ಉಪನ್ಯಾಸಕಿ ಡಾ. ವತ್ಸಲಾ ಮೋಹನ್ ಅವರನ್ನು ಸಭೆಗೆ ಪರಿಚಯಿಸಿದರು. ಯಾವತ್ತೂ ಅಂತರ್ಜಾಲದಲ್ಲಿ ಉತ್ಸಾಹದಿಂದ ಆಲಿಸುವ ಶ್ರೋತೃಗಳನ್ನೂ ಸ್ವಾಗತಿಸಲಾಯಿತು.

ಅನೇಕ ದತ್ತಿ ದಾನಿಗಳ ನಿಕಟ ಬಂಧುಗಳು ಹಾಗೂ ರಾಸ ಅವರ ಮಗಳು ಭಾರತಿ ಕಾಸರಗೋಡು ಅವರು ಭಾಗವಹಿಸಿದ್ದು ಸಭೆಗೆ ಮೆರುಗು ತಂದುಕೊಟ್ಟಿತ್ತು.

ಉಪನ್ಯಾಸಕಿ ಡಾ. ವತ್ಸಲಾ ಅವರು ತಾವು ಸಮೇತನಹಳ್ಳಿ ರಾಮರಾವ್ ಅವರ ಮಗಳು ಭಾರತಿಯವರ ಮನೆಗೆ ಇತ್ತೀಚೆಗೆ ಹೋಗಿದ್ದಾಗ ಅವರ ಮನೆಯಿಂದ ತಂದ ಪುಸ್ತಕಗಳು ಹಾಗೂ ತಿಳಿದುಕೊಂಡ ವಿಷಯಗಳ ಆಧಾರದ ಮೇಲೆ ಉಪನ್ಯಾಸದಲ್ಲಿ ಕೆಲವು ವಿಷಯಗಳನ್ನು ಸಭಿಕರ ಮುಂದೆ ಇಟ್ಟರು. ಪ್ರತಿಷ್ಠಾನದಲ್ಲಿ ನಲವತ್ತೈದು ನಿಮಿಷಗಳ ಅವಧಿಯಲ್ಲಿ ಸಾಹಿತ್ಯ ಲೋಕಕ್ಕೆ ರಾಸ ಅವರ ಕೊಡುಗೆಯ ಬಗ್ಗೆ ಹೇಳಲು ಅಸಾಧ್ಯವೆಂದು ಮನಗಂಡು, ಸಂಪೂರ್ಣ ಸಾಹಿತ್ಯದ ಅವಲೋಕನ ಮಾಡುವ ಬದಲು, ರಾಮರಾಯರ ಕೆಲವು ಕೃತಿಗಳ ಬಗ್ಗೆ ಸೀಮಿತಗೊಳಿಸಿ ಮಾತನಾಡಬೇಕೆಂದು ನಿರ್ಧರಿಸಿದ್ದೇನೆ. ಏಕೆಂದರೆ ಅವರ ಕೊಡುಗೆ ಅಪಾರವಾದದ್ದು ಎಂದರು. ಜೊತೆಗೆ ರಾಮರಾಯರ 'ತಲಕಾಡುಗೊಂಡ' ಬಹಳಷ್ಟು ಚರ್ಚೆಗೆ ಗ್ರಾಸವಾದ ಕೃತಿ ಎಂದರು. 'ರಾಸ ದರ್ಶನ' ಅಭಿನಂದನಾ ಗ್ರಂಥದ ಮಟ್ಟಿಗೆ ಹೇಳುವುದಾದರೆ, ಆ ಗ್ರಂಥದ ರಚನೆಯ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸಮಿತಿಯ ಇತರ ಸದಸ್ಯರ ಹೆಸರುಗಳನ್ನು ನೋಡಿದರೆ, ಸಮೇತನಹಳ್ಳಿ ರಾಮರಾಯರು ಎಂತಹ ಉತ್ಕೃಷ್ಟ ಸಾಹಿತ್ಯ ಕೃಷಿಯನ್ನು ಮಾಡಿ ಇಂತಹ ಧೀಮಂತ ವ್ಯಕ್ತಿಗಳ ಮೇಲೆ ಪ್ರಭಾವ ಬೀರಿದ್ದಾರೆ ಎಂಬುದು ತಿಳಿಯುತ್ತದೆ. ಅದರಲ್ಲಿನ ಲೇಖನಗಳನ್ನು ಓದಿದಾಗ ರಾಮರಾಯರ ಸಾಹಿತ್ಯದ ಬಗ್ಗೆ ಅವರುಗಳು ಬರೆದ ಉತ್ತಮ ವಿಮರ್ಶೆಗಳು ಎಂದೇ ಭಾವಿಸಬೇಕು. ರಾಮರಾಯರು ಉತ್ತಮ ಕಾವ್ಯ ರಚನೆಯಲ್ಲಿ ತಮ್ಮ ಪ್ರತಿಭೆಯನ್ನು 'ಶಾಕುಂತಲಾ' ಮಹಾಕಾವ್ಯದಲ್ಲಿ ತೋರಿದ್ದಾರೆ. ಸವತಿ

ಗಂಧ ವಾರಣೆಯಂತೂ ಓದಲೇಬೇಕಾದ ಕೃತಿ.

ಅವರ ಇನ್ನಿತರ ಕೃತಿಗಳಿಂದ ನಮಗೆ ಅಭಿವ್ಯಕ್ತವಾಗುವುದು ರಾಮರಾಯರ ಮೇಲಾದ ಸಂತರ ಪ್ರಭಾವ, ದೈವ ಭಕ್ತಿ. ಅವರು ಈ ಕೃತಿಗಳನ್ನು ಪ್ರಕಟಿಸಿದಾಗ ವ್ಯಕ್ತವಾದ ಟೀಕೆ ಟಿಪ್ಪಣಿಗಳು, ಬಂಧುಗಳಿಂದ ಎದುರಾದ ಕಷ್ಟ ಕಾರ್ಪಣ್ಯಗಳು. ಇವೆಲ್ಲವನ್ನೂ ಹಿಮ್ಮೆಟ್ಟಿಸಿ ರಾಮರಾಯರು ಸಾಹಿತ್ಯ ಕ್ಷೇತ್ರಕ್ಕೆ ಮಾಡಿರುವ ಸೇವೆ ಅಭಿನಂದನೀಯ. ರಾಯರಿಗೆ ನಾಟಕಗಳ ಬಗ್ಗೆ ಇದ್ದ ಒಲವಿನ ವಿಚಾರವಾಗಿ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಿದರು.

ರಾಸ ಸಾಹಿತ್ಯ ಮತ್ತು ರಾಮರಾವ್ ಅವರು ಸಾಹಿತ್ಯ ಲೋಕಕ್ಕೆ ನೀಡಿರುವ ಅನೇಕ ಹೊತ್ತಿಗೆಗಳನ್ನು ಓದಿದಾಗ, ಇಷ್ಟೊಂದು ಅಗಾಧವಾದ ಸಾಹಿತ್ಯಕ್ಕೆ ಸಿಗಬೇಕಾದ ಮನ್ನಣೆ ಸಿಗದಿರುವುದು ಮತ್ತು ಮುಂದುವರೆದ ಅಧ್ಯಯನ ನಡೆಯದೇ ಇರುವುದು ಆಶ್ಚರ್ಯ ಉಂಟುಮಾಡುತ್ತದೆ ಎನ್ನುತ್ತಾ ಸಮೇತನಹಳ್ಳಿ ರಾಮರಾಯರ ಶಿಕ್ಷಣ, ವೃತ್ತಿ ಜೀವನ ಮತ್ತು ಬರಹಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಗಳನ್ನು ನೀಡಿದರು. ತೆರೆ ಮರೆಯಲ್ಲೇ ಇರುತ್ತಿದ್ದ ಹಾಗೆ ರಾಮರಾಯರು, ಕರ್ಮಯೋಗಿಯಾಗಿ ಬಾಳಿದರು. ನುಡಿದಂತೆ ನಡೆದ ಸ್ವಾಭಿಮಾನಿ ವ್ಯಕ್ತಿ ರಾಮರಾಯರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿದವರು. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಉತ್ತಮ ಕೃತಿಗಳನ್ನು ನೀಡಿದ್ದಾರೆ. ಅವರ 'ಭೀಷ್ಮ ಸಂಕಲ್ಪ' ಒಂದು ಪೌರಾಣಿಕ ನಾಟಕ, ಭೀಷ್ಮನು ನಾಟಕದ ನಾಯಕ. 'ತಲಕಾಡುಗೊಂಡ' ಹೊಯ್ಸಳ ವಿಷ್ಣುವರ್ಧನನ ಭವ್ಯ ವ್ಯಕಿತ್ವನ್ನು ಬಿಂಬಿಸುವ ನಾಟಕವಾಗಿದ್ದು, ಪದವಿ ಪೂರ್ವ ಮತ್ತು ವಿಶ್ವವಿದ್ಯಾಲಯದಲ್ಲಿ ಡಿಗ್ರಿ ತರಗತಿಗಳಿಗೂ ಪಠ್ಯವಾಗಿತ್ತು ಎಂದು ಹೇಳಿ ರಾಮರಾಯರ ಕೆಲವು ಕೃತಿಗಳ ಸಂಕ್ಷಿಪ್ತ ಪರಿಚಯ ಮಾಡಿದರು. ನಂತರ ರಾಮರಾಯರ ಗೀತನಾಟಕ ಕೃತಿ 'ರಾಸಲೀಲೆ'ಯಿಂದ ಕೆಲವು ಆಯ್ದ ಭಾಗಗಳನ್ನು ವಾಚಿಸಿದರು, ಪದ್ಯಗಳಲ್ಲಿನ ಲಯ, ಭಾವಗಳನ್ನು ನಿರೂಪಿಸಿದರು. ಸವತಿ ಗಂಧವಾರಣೆ ಬಗ್ಗೆ ವಿವರವಾಗಿ ತಿಳಿಸಬೇಕೆಂದಿದ್ದರೂ, ಸಮಯದ ಅಭಾವದಿಂದ ಮೊಟಕುಗೊಳಿಸಿದರು.

ರಾಮರಾಯರ ಎಲ್ಲಾ ಕೃತಿಗಳಲ್ಲೂ ಸುಸಂಸ್ಕೃತ ಮನಸ್ಸಿನ ಅಭಿವ್ಯಕ್ತಿಯನ್ನು ಕಾಣಬಹುದು. ಹಲವಾರು ಐತಿಹಾಸಿಕ ನಾಟಕಗಳನ್ನು ಮತ್ತು ಐತಿಹಾಸಿಕ ಕಾದಂಬರಿಗಳನ್ನು ರಚಿಸಿರುವ ರಾಮರಾಯರು, ಪಾತ್ರಗಳ ಚಿತ್ರಣವನ್ನು ಬಹಳ ಮನೋಜ್ಞವಾಗಿ ಮೂಡಿಸಿದ್ದಾರೆ. ಈ ಕೃತಿಯಲ್ಲಿ ಬಳಸಿರುವ ಭಾಷೆ ಮತ್ತು ಐತಿಹಾಸಿಕ ವಿವರಗಳನ್ನು ನೀಡುವಲ್ಲಿ ಶಾಸನಗಳ ಅಧ್ಯಯನವನ್ನೂ ಮಾಡಿರುವುದುಂಟು ಎಂದು ವಿವರಿಸಿ, ತಮಗೆ ಈ ವೇದಿಕೆಯಲ್ಲಿ ಉಪನ್ಯಾಸ ನೀಡಲು ಅನುವು ಮಾಡಿಕೊಟ್ಟ ಬಿ.ಎಂ.ಶ್ರೀ.ಪ್ರತಿಷ್ಠಾನದ ಪದಾಧಿಕಾರಿಗಳಿಗೆ ವಂದಿಸಿದರು.

**ಅಧ್ಯಕ್ಷೀಯ ಭಾಷಣ**

ಬೈರಮಂಗಲ ರಾಮೇಗೌಡರು ಮಾತನಾಡುತ್ತಾ, ವತ್ಸಲಾ ಅವರ ಉಪನ್ಯಾಸ ಸಮೇತನಹಳ್ಳಿ ರಾಮರಾಯರ ಸಾಹಿತ್ಯ ಕೊಡುಗೆಯ ಒಂದು ಸಂಗ್ರಹವನ್ನೇ ನಮ್ಮ ಮುಂದೆ ಇಟ್ಟಂತಾಯಿತು. ವತ್ಸಲಾ ಅವರ ಮಾತನ್ನು ಗಮನಿಸಿದಾಗ, ರಾಮರಾಯರ ಬೆಲೆ ಬಾಳುವ ಸಾಹಿತ್ಯ ಆಗಿನ ಕಾಲಘಟ್ಟದಲ್ಲಿ ಉತ್ತಮವಾಗಿತ್ತು, ಆದರೆ ದುರದೃಷ್ಟವಶಾತ್ ಅಂದು ಮತ್ತು ಇಂದು ಅದು ಪ್ರವರ್ಧಮಾನಕ್ಕೆ ಬರದೇ ಇರುವುದು ಆಶ್ಚರ್ಯಕರ ಸಂಗತಿ. ಒಮ್ಮೊಮ್ಮೆ ಸಾಹಿತ್ಯ ಕ್ಷೇತ್ರದಲ್ಲಿ ಹೀಗೆ ಆಗಿರುವ ನಿದರ್ಶನಗಳಿವೆ. ಈಗಲಾದರೂ ರಾಮರಾಯರ ಕೊಡುಗೆಯ ಪುನರ್ ಅವಲೋಕನ ಮಾಡಬೇಕು. ಅವರು ಕೇವಲ ಎಸ್.ಎಸ್.ಎಲ್.ಸಿ. ಓದಿದ್ದರು ಎನ್ನುವುದಕ್ಕಿಂತ ಆಗಿನ ಕಾಲದಲ್ಲಿ ಅದು ಇಂದಿನ ಎಂ.ಎ. ಪದವಿಗೆ ಸಮಾನವಾದದ್ದು. ಆಗಿನ ದಿನಮಾನಗಳಲ್ಲಿ ಅವರು ರಚಿಸಿದ ಕಾವ್ಯ, ಮಹಾಕಾವ್ಯ, ಗೀತ ನಾಟಕಗಳು ಮುಂತಾದವು ಮೇರು ಮಟ್ಟದ ಸಾಹಿತ್ಯ ಕೊಡುಗೆಗಳಾಗಿದ್ದವು ಎನ್ನುವುದರಲ್ಲಿ ಸಂಶಯವಿಲ್ಲ. ರಾಷ್ಟ್ರ ಕವಿ ಕುವೆಂಪು ಅವರ ಸಮಕಾಲೀನ ಸಾಹಿತಿಗಳಾಗಿದ್ದ ರಾಮರಾಯರಿಗೆ ಅನ್ಯಾಯವಾಗಿದ್ದು ನಿಜವೇ. ಮಹಾಕಾವ್ಯಗಳನ್ನು ರಚಿಸುವ ಹುಮ್ಮಸ್ಸು, ಶಕ್ತಿ ಮತ್ತು ಪ್ರೇರಣೆ ರಾಮರಾಯರು ಪಡೆದಿದ್ದರು ಎಂಬುದು ಮೆಚ್ಚಲೇಬೇಕಾದ ವಿಷಯ. 'ಶಾಕುಂತಲಾ' ಎಂಬ ಮಹಾಕಾವ್ಯ ರಚಿಸಲು ರಾಮರಾಯರು ಇಟ್ಟುಕೊಂಡ ಪರಿಕಲ್ಪನೆ, ಪ್ರಾರಂಭದಿಂದ ಅಂತ್ಯದವರೆಗೆ ಅವರ ಬರವಣಿಗೆಯ ಬಿಗಿ ಹಿಡಿತ, ನಿರೂಪಣಾ ಶೈಲಿ, ಓದುಗನಿಗೆ ಅನುಕೂಲವಾಗುವಂತಹ ಭಾಷಾ ಪ್ರಯೋಗ ನಿಜವಾಗಿಯೂ ಕಲ್ಪನಾತೀತ. ಕುವೆಂಪು ಅವರ 'ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಸಿಕ್ಕ ಪ್ರಚಾರ, ಮನ್ನಣೆ ಸಿಗಲಾರದ್ದಕ್ಕೆ ಕಾರಣ ಹುಡುಕುತ್ತಾ ಹೋದರೆ ಉತ್ತರ ಬಹು ಬೇಗ ಸಿಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾ ರಚಿಸಿದ ಕೃತಿಗಳಿಗೆ ಹೆಚ್ಚಿನ ಪ್ರಚಾರ, ಮನ್ನಣೆ ದೊರಕುವುದು ಉಳಿದ ಸಾಹಿತಿಗಳಿಗಿಂತ, ಸ್ವಾಭಾವಿಕವಾಗಿ ಒಂದು ಕೈ ಹೆಚ್ಚು. ಇದೇ ಕಾರಣಕ್ಕಾಗಿ ಸಮೇತನಹಳ್ಳಿ ರಾಮರಾಯರಿಗೇ ಆಗಲಿ, ಅವರ ಸಾಹಿತ್ಯಕ್ಕೇ ಆಗಲಿ ಸಿಗದೇ ಇದ್ದದ್ದು ಅವರ ಕೃತಿಗಳ ಹಿರಿಮೆಯ ಅಂಶವಲ್ಲ. ಅವರ ಸಾಹಿತ್ಯದ ಕೊಡುಗೆ ಮೇರುಪದರಗಳಲ್ಲಿ ಇರುವಂತಹದ್ದು. ರಾಮರಾಯರು ಆರೋಗ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸದೇ ವಿಶ್ವವಿದ್ಯಾಲಯದಲ್ಲಿ ಇದ್ದಿದ್ದರೆ, ಅವರಿಗೂ ಖಂಡಿತ ಪ್ರಚಾರ ಸಿಕ್ಕು, ಪ್ರಶಂಸೆ, ಪ್ರಶಸ್ತಿ ಪುರಸ್ಕಾರಗಳು ಸಿಗುತ್ತಿದ್ದವು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ ಎಂದರು. ಕೇವಲ ಎಸ್.ಎಸ್.ಎಲ್.ಸಿ. ವರೆಗೆ ಓದಿ ಆರೋಗ್ಯ ಇಲಾಖೆಯ ಕೆಳ ಹುದ್ದೆಯಲ್ಲಿ ಇದ್ದುಕೊಂಡು ಸೃಷ್ಟಿಸಿದ ಒಬ್ಬ ವ್ಯಕ್ತಿಯ ಸಾಹಿತ್ಯ ಶಾಲೆಗಳ, ಪದವಿಪೂರ್ವ ವಿದ್ಯಾಲಯಗಳ ಮತ್ತು ಮಹಾವಿದ್ಯಾಲಯಗಳ ಪಠ್ಯ ಪುಸ್ತಕಗಳಾಗುತ್ತವೆ ಎಂದರೆ ಸಮೇತನಹಳ್ಳಿ ರಾಮರಾಯರ ಕೃತಿಗಳು ಎಷ್ಟು ಮಹತ್ತರವಾಗಿದ್ದವು, ಪ್ರಾಮುಖ್ಯತೆಯನ್ನು ಪಡೆದಿದ್ದವು, ಗುಣಾತ್ಮಕವಾಗಿದ್ದವು ಎಂಬುದಕ್ಕೆ ನಿದರ್ಶನ. ಇದಕ್ಕಿಂತ ಹೆಚ್ಚಿನ ಮನ್ನಣೆ ನಿರೀಕ್ಷಿಸಬಹುದೇ ಎಂದು ರಾಮೇಗೌಡರು ತಮ್ಮ ಮಾತುಗಳಲ್ಲಿ ರಾಮರಾಯರ ಸಾಹಿತ್ಯ ಕೊಡುಗೆಯ ಪ್ರಶಂಸೆ ಮಾಡಿದರು.

ರಾಮರಾಯರ ಮಗಳು ಶ್ರೀಮತಿ ಭಾರತಿ ಕಾಸರಗೋಡು ಅವರು ತಮ್ಮ ತಂದೆಯವರ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡು ಉಪನ್ಯಾಸಕ್ಕೆ ಕುಟುಂಬವರ್ಗ ದವರನ್ನು ಕರೆದುಕೊಂಡು ಬಂದಿರುವುದಕ್ಕೆ ಅಭಿನಂದಿಸಿದರು.

ಗೌರವ ಕಾರ್ಯದರ್ಶಿ ಶಾಂತರಾಜು ಅವರು ಉಪನ್ಯಾಸಕರಾದ ಶ್ರೀಮತಿ ವತ್ಸಲಾ ಮೋಹನ್ ಅವರಿಗೆ ಪ್ರತಿಷ್ಠಾನದ ಪರವಾಗಿ ನೆನಪಿನ ಕಾಣಿಕೆಯನ್ನು ಅರ್ಪಿಸಿದರು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಪ್ರಶಸ್ತಿ ಪುರಸ್ಕೃತರು ಡಾ. ಎಂ.ಎ. ಜಯಚಂದ್ರ



ಕುಳಿತಿರುವರು ಡಾ.ಎಂ.ಎ. ಜಯಚಂದ್ರ ಅವರು. ನಿಂತಿರುವರಲ್ಲಿ ಎಡದಿಂದ ಬಲಕ್ಕೆ ಶ್ರೀ ಕೆ.ಜೆ. ಪಾರ್ಶ್ವನಾಥ, ಡಾ. ಶಾಂತರಾಜು, ಡಾ.ಬೈರಮಂಗಲ ರಾಮೇಗೌಡ, ನಾಡೋಜ ಹಂಪ.ನಾಗರಾಜಯ್ಯ, ಶ್ರೀ ಪ್ರಕಾಶ್ ಕಂಬತ್ತಳ್ಳಿ

ಕನ್ನಡ ಮತ್ತು ಪ್ರಾಕೃತ ಈ ಎರಡೂ ಭಾಷೆ ಸಾಹಿತ್ಯಗಳಲ್ಲಿ ಘನವಾದ ವಿದ್ವತ್ತನ್ನು ಸಂಪಾದಿಸಿಕೊಂಡು ಎರಡೂ ಕಡೆ ಬೆಲೆಯುಳ್ಳ ಕೊಡುಗೆಯನ್ನು ಅಧ್ಯಯನ, ಸಂಶೋಧನೆ, ಸಂಪಾದನೆ, ಚಿಂತನೆಗಳ ಮೂಲಕ ಕೊಟ್ಟಿರುವ ಅಪರೂಪದ ವಿದ್ವಾಂಸರು ಡಾ. ಎಂ.ಎ. ಜಯಚಂದ್ರ.

ಶ್ರೀ ಎಂ.ಡಿ. ಆದಿರಾಜಯ್ಯ ಮತ್ತು ಶ್ರೀಮತಿ ಜಯಮ್ಮ ದಂಪತಿಗಳ ಪುತ್ರನಾಗಿ ೩.೦.೧.೧೯೪೪ರಲ್ಲಿ ಮಂಡ್ಯದಲ್ಲಿ ಜನಿಸಿದ ಜಯಚಂದ್ರ ಈಗ ವಯೋಮಾನದ ದೃಷ್ಟಿಯಿಂದ ೮೦ರ ಗಡಿಯನ್ನು ದಾಟಿದ್ದರೂ ಸೃಜನಶೀಲ ಉತ್ಸಾಹವನ್ನು ಕಳೆದುಕೊಂಡವರಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಪದವೀಧರರಾದ ಜಯಚಂದ್ರ ಡಾ. ಹಂಪನಾ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದುಕೊಂಡಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ೩೩ ವರ್ಷಗಳ ಕಾಲ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಜೈನ ಸದಸ್ಯರಾಗಿ, ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟಿನಲ್ಲಿ ಧರ್ಮದರ್ಶಿಯಾಗಿ, ಬೆಂಗಳೂರಿನಲ್ಲಿ ೧೯೭೦ರಲ್ಲಿ ನಡೆದ ರಾಷ್ಟ್ರೀಯ ಪ್ರಥಮ ಪ್ರಾಕೃತ ಸಮ್ಮೇಳನದ ಕಾರ್ಯದರ್ಶಿಯಾಗಿ, ೧೯೯೩ರಲ್ಲಿ ನಡೆದ ಮಹಾಮಸ್ತಕಾಭಿಷೇಕ ವಿಚಾರಗೋಷ್ಠಿಯ ಸಂಚಾಲಕರಾಗಿ, ರಾಜ್ಯದ ಹಲವು ವಿಶ್ವವಿದ್ಯಾಲಯಗಳಲ್ಲಿ ಜೈನ ಸಾಹಿತ್ಯ ಮತ್ತು ದರ್ಶನಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಗಳ ಆಯೋಜಕರಾಗಿ ಕೆಲಸ ಮಾಡಿದ್ದಾರೆ.

ಜಾನಪದ ತಜ್ಞ ಪ್ರಶಸ್ತಿ, ಚಾವುಂಡರಾಯ ಪ್ರಶಸ್ತಿ, ಗೊಮ್ಮಟೇಶ್ವರ ವಿದ್ಯಾಪೀಠ ಪ್ರಶಸ್ತಿ, ಸುಮಾ ವಸಂತ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿರುವ ಜಯಚಂದ್ರ ಜಾನಪದ ಕ್ಷೇತ್ರದಲ್ಲಿ ಮಾಡಿರುವ ಕೆಲಸವೂ ಮಹತ್ವದ್ದು. ಕನ್ನಡದಲ್ಲಿ ಅತ್ಯಧಿಕ ಜನಪದ ಕಥೆಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಗೊಳಿಸಿರುವ ಏಕೈಕ ವ್ಯಕ್ತಿ ಎನ್ನುವ ಹಿರಿಮೆ ಇವರದು. ೧೧೫ ಜನಪದ ಕಿರುಗತೆಗಳ ಸಂಗ್ರಹವೂ ಸೇರಿದಂತೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ೧೦ ಕೃತಿಗಳನ್ನು ಹೊರತಂದಿದ್ದಾರೆ.

ಸುಮಾರು ೨೦ ವರ್ಷಗಳ ಕಾಲ ಶ್ರವಣಬೆಳಗೊಳದ ಪ್ರಾಕೃತ ಸಂಸ್ಥೆಯ ಸಂಪರ್ಕದಲ್ಲಿದ್ದು ಧವಲ, ಜಯಧವಲ, ಮಹಾಧವಲ, ಧವಲೇತರ ಮೊದಲಾದ ಗ್ರಂಥಗಳು ಬೆಳಕು ಕಾಣುವಲ್ಲಿ ವಿಶೇಷ ಶ್ರಮ ವಹಿಸಿದ್ದಾರೆ. ಅಲ್ಲಿನ ಪ್ರಾಕೃತ ಪರೀಕ್ಷಾ ವಿಭಾಗದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದಾರೆ. ಗುರುದೇವ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಾಕೃತ ತೀರ್ಥ ಈ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಚಂದನಾಂಬಿಕೆಯ ಕಥೆ, ಶ್ರೀಪಾಲ ಚರಿತ್ರೆ, ಚಾವುಂಡರಾಯ ಪುರಾಣ, ಸಾಳ್ವ ಸಂಪುಟ, ಬಂಧುವರ್ಮನ ವಚನಗಳು ಮೊದಲಾದ ಹಳಗನ್ನಡ ಕೃತಿಗಳನ್ನೂ, ಸಮಣಸುತ್ತಂ, ಅರ್ಧಮಾಗಧಿ ಆಗಮ ಸಾಹಿತ್ಯ ಝಾಣಜ್ಝಯಣ, ಅಗಪದತ್ತ, ಛತ್ಖಂಡಾಗಮಲೇಪಣ ಕಥಾ, ಸಂವೇಗ ಚೂಡಾಮಣಿ ಮೊದಲಾದ ಪ್ರಾಕೃತ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ೬೦ಕ್ಕೂ ಹೆಚ್ಚು ಪುಸ್ತಕಗಳು ಈಗಾಗಲೇ ಹೊರಬಂದಿದ್ದು ವಡ್ಡಾರಾಧನೆಗೆ ಸಂಬಂಧಿಸಿದ ಲೇಖನಗಳ ಸಂಗ್ರಹ, ಪ್ರಾಕೃತ ಸಾಹಿತ್ಯದಲ್ಲಿ ಜಾನಪದ ಕಥೆಗಳು, ನಯಸೇನನ ವಚನಗಳು ಮುಂತಾದ ಕೃತಿಗಳು ಪ್ರಕಟಣೆಗೆ ಸಿದ್ಧವಾಗಿವೆ. ವಡ್ಡಾರಾಧನೆಯಲ್ಲಿ ಸ್ತ್ರೀ, ಜೈನ ಧರ್ಮದಲ್ಲಿ ಮಾನವೀಯ ಮೌಲ್ಯಗಳು, ಗೊಮ್ಮಟ ಸಂದೇಶ ಮುಂತಾದ ವಿಮರ್ಶಾ ಗ್ರಂಥಗಳನ್ನೂ ಜಯಚಂದ್ರ ಪ್ರಕಟಿಸಿದ್ದಾರೆ.

ಜೈನಧರ್ಮ ಮತ್ತು ಸಾಹಿತ್ಯಕ್ಕೆ ಬಹುಮುಖ ಪಾಂಡಿತ್ಯದಿಂದ ಅಮೂಲ್ಯ ಕೊಡುಗೆ ನೀಡಿರುವ ಡಾ. ಎಂ.ಎ. ಜಯಚಂದ್ರ ಅವರಿಗೆ ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ಶ್ರೀ ಕೆ.ಜೆ.ಪಾರ್ಶ್ವನಾಥ ಅವರು ತಮ್ಮ ತಂದೆ ತಾಯಿ ಹೆಸರಿನಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಸ್ಥಾಪಿಸಿರುವ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ಹೆಸರಿನ ೨೦೨೪ರ ದತ್ತಿ ಪ್ರಶಸ್ತಿಯನ್ನು ರೂ ೨೫,೦೦೦ ನಗದು ಮತ್ತು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತಿದೆ.

ಶ್ರೀ ಪಾರ್ಶ್ವನಾಥ್ ಅವರು ಪ್ರತೀ ವರ್ಷ ಜೈನಧರ್ಮ ಮತ್ತು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಸಾಹಿತಿ/ ಸಂಶೋಧಕರೊಬ್ಬರನ್ನು ಗುರುತಿಸಿ, ಗೌರವಿಸಿ ಪ್ರಶಸ್ತಿಯೊಂದನ್ನು ನೀಡುವ ಸದುದ್ದೇಶದಿಂದ ದತ್ತಿಯನ್ನು ಸ್ಥಾಪಿಸಿದ್ದಾರೆ. ಜೀವಣ್ಣನವರು ಕೃಷಿ ವೃತ್ತಿಯೊಂದಿಗೆ ಶಾಲಾ ಉಪಾಧ್ಯಾಯರಾಗಿಯೂ ಹಲವಾರು ಸ್ಥಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಓದು ಬರಹದಲ್ಲಿ ಆಸಕ್ತಿ ಹೊಂದಿದ್ದ ಜೀವಣ್ಣನವರು ಹಳಗನ್ನಡದಲ್ಲಿ ಪದ್ಯಗಳನ್ನು ವಿವಿಧ ಛಂದಸ್ಸಿನಲ್ಲಿ ರಚಿಸುತ್ತಿದ್ದರು. ಪ್ರಾಕೃತ ಭಾಷೆಯಲ್ಲೂ ಪರಿಣಿತಿ ಹೊಂದಿದ್ದು, ಗೊಮ್ಮಟ ಸ್ತುತಿಯನ್ನು ಪ್ರಾಕೃತದಲ್ಲಿ ರಚಿಸಿದ್ದಾರೆ. ಇವರ ಪತ್ನಿ ಪದ್ಮಾವತಮ್ಮ ಧಾರ್ಮಿಕ ಸ್ವಭಾವದವರಾಗಿ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ಹೊಂದಿದ್ದರು. ಈ ದತ್ತಿ ಅಡಿಯಲ್ಲಿ ಇಂದು ಎರಡನೇ ವರ್ಷದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ.

### ಶ್ರೀ ನಾರಾಯಣ ಸ್ತುತಿಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಹಂ.ಪ. ನಾಗರಾಜಯ್ಯ ಅವರು ಸಾಹಿತಿ ಎಂ.ಎ. ಜಯಚಂದ್ರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಒಬ್ಬ ಪ್ರತಿಭಾವಂತ ಸಾಹಿತಿ ಮತ್ತು

ಸಾಧಕನಿಗೆ ಪ್ರಶಸ್ತಿ ನೀಡುವುದು ಒಂದು ಸೌಭಾಗ್ಯ. ಆ ಕೆಲಸ ಇಂದು ತಮ್ಮಿಂದ ಆಗುತ್ತಿರುವುದು ನನಗೆ ಸಂತೋಷವನ್ನು ಉಂಟುಮಾಡಿದೆ ಎಂದರು.

ಪ್ರಾಕೃತಿಕ ಸಮಸ್ಯೆಗಳುಂಟಾದರೆ ಹೇಗೋ ಪರಿಹಾರ ಸಿಕ್ಕಿಬಿಡುತ್ತದೆ. ಬರ ಬಿದ್ದಾಗ ಮಳೆ ಸುರಿದು ನೀರು ಉಕ್ಕಬಹುದು. ವಾಯು ಮಾಲಿನ್ಯವಾದರೆ ಅದಕ್ಕೆ ಶಮನ ಉಂಟು. ಒಂದು ವೇಳೆ ವಿದ್ವತ್ತಿನ ಕ್ಷಾಮ ಉಂಟಾದರೆ ಬಕಪಕ್ಷಿಯಂತೆ ಕಾಯಬೇಕಾಗಬಹುದೇನೋ. ವಿದ್ವತ್ತು ಅವಸರ್ಪಿಣಿ ಯುಗದಲ್ಲಿ ಇದ್ದಂತೆ ಭಾಸವಾಗುತ್ತಿದೆ. ಶತಮಾನಗಳ ಹಿಂದೆ ವಿದ್ವತ್ತು ಪ್ರಕಾಶಮಾನವಾಗಿತ್ತು. ಅದೊಂದು ಬೆಳಕಿನ ಪ್ರತೀಕ. ಅದಿಲ್ಲದಿದ್ದರೆ ಕತ್ತಲು ಕವಿದಂತೆ. ಇಂದು ವಿದ್ವತ್ತಿನ ಕ್ಷೇತ್ರ ಸರ್ವತೋಮುಖ ಅಭಿವೃದ್ಧಿ ಹೊಂದಬೇಕಾಗಿದೆ. ಬೇರೆಲ್ಲಾ ಕ್ಷೇತ್ರಗಳ ಅಭಿವೃದ್ಧಿ ನೋಡಿದಾಗ, ವಿದ್ವತ್ತಿನ ಕ್ಷೇತ್ರ ಕುಂಠಿತ ಆಗಿರುವುದು ವಿಷಾದನೀಯ ಎಂದು ಹಂಪನಾ ತಮ್ಮ ಕಳವಳವನ್ನು ವ್ಯಕ್ತಪಡಿಸಿದರು. ಇಂತಹ ವಾತಾವರಣದಲ್ಲಿ ಎಂ.ಎ. ಜಯಚಂದ್ರ ಅವರ ಸಾಹಿತ್ಯ ಸೇವೆ ಮೆಚ್ಚುವಂತಹುದು. ಇಂತಹವರ ಪೀಳಿಗೆ ಇರಲಿ, ಬರಲಿ ಎಂದು ಹೇಳುತ್ತಾ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ, ಅವರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಗಂಗೆ ಹರಿಯಲಿ ಎಂದು ಹಾರೈಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ಬೈರಮಂಗಲ ರಾಮೇಗೌಡ ಅವರು ಮಾತನಾಡಿ ಯಾವುದೇ ಕ್ಷೇತ್ರವಿರಲಿ ಅದರಲ್ಲಿ ವಿದ್ವತ್ತು, ಪ್ರಾಮಾಣಿಕ ಪ್ರಯತ್ನ, ಶಿಸ್ತು ಮತ್ತು ಶ್ರದ್ಧಾಮನೋಭಾವ ಅತ್ಯಗತ್ಯ. ಇವುಗಳ ಸಂಗಮವಾದಾಗಲೇ ಉತ್ತಮ ಸಂಶೋಧನೆ ಸಾಧ್ಯ. ವ್ಯಾವಹಾರಿಕ ಜಗತ್ತಿನಲ್ಲಿ ಇಂತಹ ವ್ಯಕ್ತಿಗಳು ವಿರಳವಾಗುತ್ತಿದ್ದಾರೆ. ಅಲ್ಲೊಂದು ಇಲ್ಲೊಂದು ಕಾಮಧೇನುಗಳು ಹುಟ್ಟಿಕೊಂಡರೂ ಇನ್ನೂ ಹೆಚ್ಚಿನ ಆಚಾರ್ಯರ ಅಗತ್ಯವಿದೆ. ಇಂದು ಪ್ರಶಸ್ತಿ ಸ್ವೀಕರಿಸಿದ ಜಯಚಂದ್ರ ಅವರು ಈ ದಿಶೆಯಲ್ಲಿ ಒಬ್ಬ ಆದರ್ಶಪ್ರಾಯ ವ್ಯಕ್ತಿ. ಇವರಂತಹ ಪೀಳಿಗೆ ಬೆಳೆಯಲಿ ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿ ಜಯಚಂದ್ರ ಅವರನ್ನು ಅಭಿನಂದಿಸಿದರು.

ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಮಾತನಾಡಿ ಜೈನ ಸಾಹಿತ್ಯ ಮತ್ತು ಸಂಸ್ಕೃತಿಗೆ ಜಯಚಂದ್ರ ಅವರ ಕೊಡುಗೆ ಬೆಲೆ ಕಟ್ಟಲಾಗದಂತದ್ದು, ತಮ್ಮ ಸಹೋದರರೊಡಗೂಡಿ ದತ್ತಿ ಸ್ಥಾಪಿಸಿ ತಮ್ಮ ತಂದೆ ತಾಯಿಯವರ ಹೆಸರಿನಲ್ಲಿ ಬಹುಮಾನದ ಜೊತೆಗೆ ಉತ್ತಮೋತ್ತಮರನ್ನು ಗುರುತಿಸಿ ಪುರಸ್ಕರಿಸುವ ಅವಕಾಶ ತಮಗೆ ದಕ್ಕಿದ್ದು ಹಿರಿಯರ ಆಶೀರ್ವಾದ ಎಂದರು. ಈ ಸತ್ಕಾರ್ಯಕ್ಕೆ ಮುಂದಾದ ತಮ್ಮ ಸಹೋದರ ಕೆ.ಜೆ. ಪಾರ್ಶ್ವನಾಥ ಅವರನ್ನು ಶ್ಲಾಘಿಸಿದರು.

### ‘ಕರ್ನಾಟಕ ಲೋಚನ’ ಲೋಕಾರ್ಪಣೆ



ಡಾ.ಶಾಂತರಾಜು, ಶ್ರೀ ಕೆ.ಜೆ. ಪಾರ್ಶ್ವನಾಥ, ಡಾ.ಎಂ.ಎ. ಜಯಚಂದ್ರ, ನಾಡೋಜ ಹಂಪ.ನಾಗರಾಜಯ್ಯ, ಡಾ.ಬೈರಮಂಗಲ ರಾಮೇಗೌಡ, ಶ್ರೀ ಚಂದ್ರಶೇಖರ ನಾದೂರು

ಇದೇ ಸಂದರ್ಭದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ‘ಷಾಣ್ಮಾಸಿಕ’ ವಿದ್ವತ್ ಪತ್ರಿಕೆಯಾದ ‘ಕರ್ನಾಟಕ ಲೋಚನ’ದ ಸಂಪುಟ ೩೮ ಸಂಚಿಕೆ ೧ ಇದರ ‘ಲೋಕಾರ್ಪಣೆ’ಯನ್ನು ಹಂಪನಾ ಅವರು ನೆರವೇರಿಸಿದರು.

ಈ ಸಮಾರಂಭದಲ್ಲಿ ಅನೇಕ ಗಣ್ಯರು, ಸಾಹಿತ್ಯ ಲೋಕದ ದಿಗ್ಗಜರು, ಕಂಬತ್ತಳ್ಳಿ ಕುಟುಂಬ ಮತ್ತು ಅಂಕಿತ ಪುಸ್ತಕ ಪ್ರಕಾಶನದ ಸೇವಾ ಬಳಗ ಮತ್ತು ಮಾಧ್ಯಮದವರೂ ಇದ್ದದ್ದು ಸಮಾರಂಭಕ್ಕೆ ಶೋಭೆ ತಂದಿತ್ತು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಪ್ರಕಟಣೆ**

## ಭಕ್ತಿಗೀತೆ ಗಾಯನ ಸ್ಪರ್ಧೆ ಮತ್ತು ಭರತನಾಟ್ಯ ಸ್ಪರ್ಧೆಗಳಿಗೆ ಅರ್ಜಿ ಆಹ್ವಾನ

### ಶ್ರೀ ಕೆ. ಮೋಹನ್ ದೇವ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಸ್ಥಾಪಿಸಿರುವ ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ಮತ್ತು ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ದತ್ತಿನಿಧಿ

ಕೆ. ಮೋಹನ್ ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ದಂಪತಿಗಳು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಸ್ಥಾಪಿಸಿರುವ ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ಮತ್ತು ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ದತ್ತಿಗಳ ಆಶ್ರಯದಲ್ಲಿ ಇದೇ ಆಗಸ್ಟ್ ೨೫ ರಂದು ಭಾನುವಾರ ಬೆಳಗ್ಗೆ ೧೦.೩೦ಕ್ಕೆ ಭಕ್ತಿಗೀತೆ ಗಾಯನ ಮತ್ತು ಭರತನಾಟ್ಯ ಸ್ಪರ್ಧೆಯನ್ನು ೧೩ರಿಂದ ೧೮ರ ವಯೋಮಾನದವರಿಗಾಗಿ ಆಯೋಜಿಸಲಾಗಿದೆ. ಪ್ರಥಮ ಮೂರು ಸ್ಥಾನಗಳನ್ನು ಪಡೆದವರಿಗೆ ಕ್ರಮವಾಗಿ ರೂ. ೪,೦೦೦/–, ೩,೦೦೦/– ಮತ್ತು ೨,೦೦೦/– ನಗದು ಬಹುಮಾನದೊಂದಿಗೆ ಪ್ರಮಾಣಪತ್ರವನ್ನು ಕೊಡಲಾಗುತ್ತದೆ. ಆಸಕ್ತರು ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ ನಿಗದಿತ ನಮೂನೆಯ ಅರ್ಜಿ ಪಡೆದು ವಯಸ್ಸಿನ ದೃಢೀಕರಣದೊಂದಿಗೆ ಮೇಲ್ಕಾಣಿಸಿದ ಸ್ಪರ್ಧೆಗಳಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ನೋಂದಾಯಿಸಿಕೊಳ್ಳಲು ಕಡೆಯ ದಿನಾಂಕ : ೧೫.೦೮.೨೦೨೪.

## ಜುಲೈ ೨೮, ಭಾನುವಾರ ಬೆಳಗ್ಗೆ ೧೦.೩೦ಕ್ಕೆ
## ಸರ್ವ ಸದಸ್ಯರ ಸಾಮಾನ್ಯ ಸಭೆ

ಬಿ.ಎಂ.ಶ್ರೀ. ಪ್ರತಿಷ್ಠಾನದ ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆದು ೨೦೨೩–೨೪ನೇ ಸಾಲಿನ ಕಾರ್ಯ ಚಟುವಟಿಕೆಗಳ ವರದಿ ಮತ್ತು ಅದೇ ಸಾಲಿನ ಹಣಕಾಸು ವ್ಯವಹಾರದ ಲೆಕ್ಕ ಪರಿಶೋಧಕರ ವರದಿಯನ್ನು ಅಂಗೀಕರಿಸಲಾಯಿತು.

೨೦೨೪–೨೫ನೇ ಹಣಕಾಸಿಗೆ ಆಯವ್ಯಯ ಅಂದಾಜಿನ ಲೆಕ್ಕವನ್ನೂ ಒಪ್ಪಲಾಯಿತು. ೨೦೨೪–೨೫ರಿಂದ ೨೦೨೬–೨೭ನೇ ಮೂರು ವರ್ಷದ ಅವಧಿಗೆ ಐದು ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆದು ಈ ಕೆಳಕಂಡ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

೧. ಶ್ರೀ ಎಂ. ಕೃಷ್ಣಮೂರ್ತಿ

೨. ಡಾ. ಎನ್. ಗೋಪಾಲಕೃಷ್ಣ

೩. ಶ್ರೀ ಚಂದ್ರಶೇಖರ ನಾದೂರು

೪. ಶ್ರೀ ಎ.ಎನ್. ಅನಂತಮೂರ್ತಿ

೫. ಶ್ರೀ ಡಿ.ನಂ. ವೆಂಕಟರಮಣಯ್ಯ

ಬಿ.ಎಂ.ಶ್ರೀ. ಪ್ರತಿಷ್ಠಾನವು ಇವರನ್ನು ಅಭಿನಂದಿಸುತ್ತದೆ. ಸವಿಭೋಜನದೊಂದಿಗೆ ಸಭೆ ಮುಕ್ತಾಯವಾಯಿತು.



ನೂತನವಾಗಿ ಆಯ್ಕೆಯಾದ ಸದಸ್ಯರುಗಳು ಶ್ರೀ ಡಿ.ನಂ. ವೆಂಕಟರಮಣಯ್ಯ, ಶ್ರೀ ಎಂ. ಕೃಷ್ಣಮೂರ್ತಿ, ಶ್ರೀ ಚಂದ್ರಶೇಖರ ನಾದೂರು, ಶ್ರೀ ಎ.ಎನ್. ಅನಂತಮೂರ್ತಿ, ಡಾ. ಎನ್. ಗೋಪಾಲಕೃಷ್ಣ ಪ್ರತಿಷ್ಠಾನದ ಪದಾಧಿಕಾರಿಗಳೊಂದಿಗೆ

## ಪ್ರಸ್ತುತ ತಿಂಗಳ ಅಂಗಳ

**ದಿನಾಂಕ ೧೭–೦೮–೨೦೨೪ ಶನಿವಾರ**
**ಸಂಜೆ ೫.೦೦ ರಿಂದ**
**ಎ.ಸುಬ್ಬಯ್ಯ ಹೆಗಡೆ ಶಾಸ್ತ್ರಿ – ಎಂ.ಕೆ. ವಿಜಯಲಕ್ಷ್ಮಿ – ಎನ್.ಅನಂತರಂಗಾಚಾರ್, ಅನಂತರಂಗ ಪ್ರತಿಷ್ಠಾನ ದತ್ತಿ**
ವಿಷಯ : ಕನ್ನಡ ಸಾಹಿತ್ಯಕ್ಕೆ ಎನ್. ಅನಂತರಂಗಾಚಾರ್ಯರ ಕೊಡುಗೆ
ಉಪನ್ಯಾಸಕರು : ಪ್ರೊ.ಎಸ್.ಬಿಳಿಗಿರಿವಾಸನ್, ನಿವೃತ್ತ ಪ್ರಾಧ್ಯಾಪಕರು

**ದಿನಾಂಕ ೨೦–೦೮–೨೦೨೪ ಮಂಗಳವಾರ**
**ಸಂಜೆ ೫.೦೦ ರಿಂದ**
**ಶ್ರೀಮತಿ ರುಕ್ಮಿಣಮ್ಮ ಶ್ರೀ ಸೀತಾರಾಮರಾವ್ ದತ್ತಿ**
ವಿಷಯ : ಕನ್ನಡ ಪ್ರವಾಸ ಸಾಹಿತ್ಯದಲ್ಲಿ ವಿಭಿನ್ನ ಗ್ರಹಿಕೆಗಳು ಹಾಗೂ ಪ್ರವಾಸಿಯ ಮನೋಧರ್ಮ
ಉಪನ್ಯಾಸಕರು : ಡಾ. ಬಿ.ಟಿ. ಅನುರಾಧ, ವಿಶ್ರಾಂತ ಪ್ರಾಧ್ಯಾಪಕರು ಎನ್.ಎಂ.ಕೆ.ಆರ್.ವಿ. ಮಹಾವಿದ್ಯಾಲಯ

**ದಿನಾಂಕ ೨೫–೦೮–೨೦೨೪ ಭಾನುವಾರ ಬೆಳಗ್ಗೆ ೧೦.೩೦ ರಿಂದ**
**ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ಮತ್ತು ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ದತ್ತಿನಿಧಿ**
ಭಕ್ತಿ ಗಾಯನ ಮತ್ತು ಭರತನಾಟ್ಯ ಸ್ಪರ್ಧೆಗಳು



# ಬಿ.ಎಂ.ಶ್ರೀಕಂಠಯ್ಯ

## ೫. 'ಹೊಂಗನಸುಗಳು'

ಮುಂದುವರೆದ ಭಾಗ–೫

**ಡಾ. ರಾಮೇಗೌಡ (ರಾಗೌ)**

'ಹೊಂಗನಸುಗಳು' ಬಿ.ಎಂ.ಶ್ರೀ.ಯವರ ಸ್ವತಂತ್ರ ಕವನ ಸಂಕಲನ. ಆದರೆ 'ಇಂಗ್ಲಿಷ್ ಗೀತೆಗಳು' ಅನುವಾದ ಸಂಕಲನದಲ್ಲಿರುವ 'ಹೊಸತು' ಇಲ್ಲಿ ಇಲ್ಲವೆಂದು ಹೇಳಬೇಕು. 'ಭಾಷೆ' ಮತ್ತು 'ಭಾವ' ಎರಡರಲ್ಲೂ ಸಾಂಪ್ರದಾಯಿಕವಾಗಿ ಕಾಣುವ ಈ ಸಂಕಲನದ ಹೊಸಗನ್ನಡ ಕವಿತೆಗಳ ನಿಜವಾದ ಆರಂಭದ ಮೇಲೆ ಪ್ರಭಾವ ಬೀರದೆ ಹೋದದು 'ಶ್ರೀ'ಯವರ ಸೃಜನಶೀಲ ಪ್ರತಿಭೆಯ ವಿಪರ್ಯಾಸವನ್ನೇ ಹೇಳುತ್ತದೆ. ಪದ್ಯ ರಚನೆಯಲ್ಲಿ 'ಪ್ರಗಾಥ' ಮುಂತಾದ ಹೊಸ ಪ್ರಯೋಗವೇನೊ ಇಲ್ಲಿದೆ. ಬರವಣಿಗೆ ಓಜಸ್ವಿಯಾಗೇನೊ ಕಾಣುವುದು; ಆದರೆ ಪಾಂಡಿತ್ಯದಿಂದ ಕುಸಿಯುತ್ತಿರುವಂತೆ ಭಾಸವಾಗುವುದು. ರನ್ನನನ್ನು ಓದಿದ್ದರಿಂದ ಹೀಗೆ ಆಗಿರಲು ಸಾಧ್ಯ. ಹಳಗನ್ನಡ ರೀತಿಯನ್ನು ಕೆಲವು ಪದ್ಯಗಳು ಅನುಸರಿಸಿರುವುದನ್ನು ನೋಡಿದರೆ ಇದು ಇನ್ನೂ ಬಲವಾಗುವುದು. 'ವಸ್ತು' ಮತ್ತು 'ಆಲೋಚನೆ'ಯಲ್ಲಿ ಸೀಮೋಲ್ಲಂಘನೆ ಮಾಡಿದಂತೇನೂ ತೋರುವುದಿಲ್ಲ. ಇಲ್ಲಿಯ ಬಹಳ ಕವಿತೆಗಳು 'ಆಳುವವರ' ಪರವಾಗಿರುವುದು ಸ್ಪಷ್ಟ. ಸಾಮಾನ್ಯ ಜೀವನಾಡಿಯನ್ನು ಮಿಡಿಯುವ ಯಾವ ಪ್ರಯತ್ನವೂ ಇಲ್ಲಿ ನಡೆದಂತಿಲ್ಲ. ಕಾವ್ಯದಲ್ಲಿ ಸಾಮಾನ್ಯರ ಜೀವನವನ್ನು ಉದ್ಘಾಟಿಸಿದ ಕೀರ್ತಿಗೆ ಪಾತ್ರವಾಗಿರುವ ನವೋದಯದ ಮುಖ್ಯ ಲಕ್ಷಣ ಯಾವುದೂ ಇಲ್ಲಿನ ಕವಿತೆಗಳಲ್ಲಿ ಬಿಂಬಿತವಾಗಿಲ್ಲ. 'ಇಂಗ್ಲಿಷ್ ಗೀತಗಳು' ಮೂಲಕ ಪ್ರಸಾರವಾದ 'ಹೊಸಲಯ'ಗಳು ಕೂಡ ಇಲ್ಲಿ ವಿಜೃಂಭಿಸದೆ ಹೋದುದು ಚರ್ಚೆಗೆ ಗ್ರಾಸವಾಗುವುದು ಸಹಜ. ಇದರಿಂದ ಭಾಷಾಂತರ ಕೃತಿಯ ಮೂಲಕ ಕಂಡ ಹೊಸಗನ್ನಡ ಕವಿತೆಯ 'ಪ್ರಗತಿ' ಮತ್ತು 'ಕ್ರಾಂತಿ' ಸ್ವತಂತ್ರ ಕವನಗಳಲ್ಲಿ ಮುಂದುವರಿಯದೆ ಹೋದುದು ಒಂದು ಆತಂಕದ ವಿಷಯವೇ. ಇದಕ್ಕೆಲ್ಲ ಮುಖ್ಯವಾಗಿ 'ವ್ಯವಸ್ಥೆ' ಅಥವಾ 'ಸಾಮ್ರಾಜ್ಯಶಾಹಿ' ಪರವಾದ ಬಿ.ಎಂ.ಶ್ರೀ.ಯವರ ನೀತಿಯೇ ಕಾರಣವಿರಬೇಕು. ಸ್ವಾತಂತ್ರ್ಯ ಸಂಗ್ರಾಮದ ಆಂದೋಲನದ ಬಗ್ಗೆ ಒಲವು ತೋರದೆ ಹೋದುದು ಸಮಕಾಲೀನ ಜೀವನಾನುಭವಕ್ಕೆ ಅಭಿವ್ಯಕ್ತಿ ಕೊಡದಿರುವುದಕ್ಕೆ ನಿಜವಾದ ಕಾರಣವಿರಬಹುದು. ಈ ಕವನ ಸಂಕಲನದ 'ಸೃಜನಶೀಲ ಹಿನ್ನಡೆ' ನಿಜವಾಗಿಯೂ ಆಶ್ಚರ್ಯ ಹುಟ್ಟಿಸುವುದು.

ಈ ಸಂಕಲನದಲ್ಲಿ ಮುಖ್ಯವಾಗಿ ಭಾಷಾಪ್ರೇಮ, ದೇಶಪ್ರೇಮ ಮತ್ತು ರಾಜಭಕ್ತಿಗೆ ಸಂಬಂಧಿಸಿದ ಕವಿತೆಗಳಿವೆ. ಈ ದೃಷ್ಟಿಯಿಂದ ಶ್ರೀಯವರ ಸೃಜನಶೀಲ ಕ್ಷೇತ್ರ ಸೀಮಿತವಾದುದೆಂದೇ ಹೇಳಬೇಕು. ವಿಶಾಲ ಜೀವನವನ್ನೂ, ಅದರ ಎಲ್ಲ ಸಮಸ್ಯೆಗಳನ್ನೂ ಅವರು ಸ್ಪರ್ಶಿಸಲೇ ಇಲ್ಲ. ಅದು ಕಾರಣವಾಗಿ, 'ಜೀವನದ ನೂರೆಂಟು ಆಸೆಗಳೂ ಸುಖ ದುಃಖಗಳೂ ಅವರನ್ನು ಕಾವ್ಯ ಸೃಷ್ಟಿಗೆ ಪ್ರೇರಿಸಿದಂತಿಲ್ಲ' ಎಂಬ ಎ.ಎನ್. ಮೂರ್ತಿರಾಯರ ಮಾತು ಸತ್ಯ. ರಾಜಾಶ್ರಯ ಭಾವದಿಂದ ಹೊರಬರದೇ ಹೋದುದು ಇದಕ್ಕೆಲ್ಲ ಕಾರಣ; ಅವರ ಪ್ರತಿಭೆಯ ಮಿತಿಯೂ ಇದರಲ್ಲಿ ಸೇರಿಸಬಹುದು. ವಸ್ತು, ಅಭಿವ್ಯಕ್ತಿ, ಲಯ ಈ ಯಾವುದರಲ್ಲೂ ಇದು ಮಹತ್ವ ಅನಿಸುವುದಿಲ್ಲ. ಕೆಲವೊಮ್ಮೆ ಹೊಸ ಛಂದಸ್ಸೂ ಲಯವೂ ಅಳವಟ್ಟಂತೆ ತೋರಬಹುದು. ಉದಾಹರಣೆಗೆ 'ಭರತಮಾತೆಯ ನುಡಿ', ಆದರೆ ಅದು ತಾತ್ಕಾಲಿಕ ಮಾತ್ರ. ಇದ್ದಕ್ಕಿದ್ದಂತೆ ಶ್ರೀಯವರು ಹಳಗನ್ನಡಕ್ಕೆ ಹೊರಳುತ್ತಾರೆ; ಆವೇಶದ ಅಭಿವ್ಯಕ್ತಿಗೆ ಒಳಗಾಗುತ್ತಾರೆ. ಅವರಿಗೆ ಇಲ್ಲೆಲ್ಲ ಕಾಣುವುದು ಮೈಸೂರು ರಾಜರ ಇತಿಹಾಸ, ವೈಭವ, ಭಕ್ತಿ, ಹೊಗಳಿಕೆ, ಅರಮನೆ, ರಾಜರು, ರಾಜಪರಿವಾರದ ಬಗೆಗಿನ ಶ್ರದ್ಧೆ. ತಮಗಿರುವ 'ರಾಜಸೇವಾಸಕ್ತ' ಬಿರುದನ್ನು ಸಾರ್ಥಕಪಡಿಸುವಂತೆ ಇಲ್ಲಿಯ ಕವನಗಳ ರಚನೆಯಿದೆ, ಮನಸ್ಸು ಮಾಡದಿದ್ದರೆ ಅವರು ಇದನ್ನೆಲ್ಲ ದಾಟಬಹುದಾಗಿತ್ತು. ವಿಶಾಲವಾದ ಜೀವನಾನುಭವ ಅವರಿಗೆ ತಳಹದಿಯಾಗಿತ್ತು; ಜೊತೆಗೆ, ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಅನುಸಂಧಾನಗಳಿದ್ದುವು. ಆದರೂ ಇಂಗ್ಲಿಷ್ ಸಾಹಿತ್ಯದ 'ಭಾವುಕತೆ'ಯಿಂದ ಪ್ರೇರಿತರಾದರೇ ಹೊರತು, ಅದರ 'ವಿಚಾರ'ದಿಂದ ಸ್ಫೂರ್ತಿ ಪಡೆಯಲಿಲ್ಲ. ಅವರು ಯಾವುದನ್ನೂ 'ಭಾವುಕ'ವಾಗಿ ನೋಡುವುದು ಹೆಚ್ಚು. ಆದ್ದರಿಂದ ವೈಭವೀಕರಿಸುವುದೂ ಅದರೊಡನೆ ಬಂದಿತು. 'ಹೊಂಗನಸುಗಳು' ಸಂಕಲನದ ಪದ್ಯಗಳ ರಚನೆಯ ಹಿಂದೆ ಇರಬಹುದಾದ ಭಿತ್ತಿ ಇದು. ಎಲಿಯಟ್ ಹೇಳುವ 'Temporal' ಆದುದಕ್ಕೆ ಮಣೆ ಇತ್ತರು, 'Time less' ಆದುದಕ್ಕೆ ಕಾಳಜಿ ವಹಿಸಲಿಲ್ಲ. ಇಲ್ಲಿಯ ಪದ್ಯಗಳು ವ್ಯರ್ಥವಲ್ಲದಿದ್ದರೂ, ಸಾರ್ಥಕವೆನಿಸಲಿಲ್ಲ.

ಶ್ರೀಕಂಠಯ್ಯನವರಿಗೆ ಇಲ್ಲಿ ಮುಖ್ಯವಾದುದು ಎರಡೇ : ಕನ್ನಡ ಪ್ರೇಮ. ಒಡೆಯರ ಪ್ರೇಮ. ಉಳಿದುದೆಲ್ಲ ಅವರಿಗೆ ಪ್ರಾಸಂಗಿಕ. 'ಕನ್ನಡ ಬಾವುಟ' ಒಂದು ಒಳ್ಳೆಯ ಉದಾಹರಣೆ. ಹೊಸ ರೀತಿಯಲ್ಲಿ ಬರೆಯುವುದರ ಮೂಲಕ ಲಿಪಿ ಸಂಸ್ಕರಣಕ್ಕೆ ಕರೆಕೊಟ್ಟರು; ಆದರೆ ಅದು ಅವಾಸ್ತವವಾಗಿತ್ತು. ಜನಪ್ರಿಯ ಕವನದ ಒಂದು ಜನಪ್ರಿಯ ಪದ್ಯವಿದು.

**ಬಾಳ್ ಕನ್ನಡ ತಾಯ್**
**ಏಳ್ ಕನ್ನಡ ತಾಯ್**
**ಆಳ್ ಕನ್ನಡ ತಾಯ್**
**ಕನ್ನಡಿಗರೊಡತಿ ಓ ರಾಜೇಶ್ವರೀ**

ಇಲ್ಲಿನ 'ಬಾಳ್'ನ್ನು 'ಬೞ್' ಎಂದೂ, 'ತಾಯ್'ನ್ನು 'ತಽಯ್' ಎಂದೂ, 'ಏಳ್'ನ್ನು 'ಎಽಳ್' ಎಂದೂ, 'ಆಳ್'ನ್ನು 'ಅಽಳ್'ನ್ನು ಎಂದೂ ಬರೆದರು. ಅವರ 'ಕನ್ನಡದ ಬಾವುಟ' ಪದ್ಯ ಇಡಿಯಾಗಿ ಈ ರೀತಿಯ ರಚನೆಯಿಂದಾಗಿದೆ. ಇದೆಲ್ಲವೂ ಅವೈಜ್ಞಾನಿಕ ಮಾತ್ರವಲ್ಲ, ಉಚ್ಚಾರಣೆಗೆ ಅನನುಕೂಲವೂ ಆಗಿತ್ತು. ಇಂತಹ ಪ್ರಯೋಗಶೀಲತೆ ಅನಗತ್ಯವೆಂದೇ ಹೇಳಬೇಕು. ಅವರ ಕನ್ನಡ ಪ್ರೇಮದ ಅತಿರೇಕಕ್ಕೆ ಇದೊಂದು ಉದಾಹರಣೆ ಅಷ್ಟೆ; ಆದರೂ ಅವರ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವಂತಿಲ್ಲ. ನೆನಪಿರಲಿ: 'ಸಿರಿಗನ್ನಡಂ ಗೆಲ್ಗೆ' ಎಂದು ಮೊದಲಿಗೆ ಹೇಳಿದವರು ಬಿ.ಎಂ. ಶ್ರೀಕಂಠಯ್ಯನವರೇ.

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-07-2024

ಶ್ರೀಯವರ ಕನ್ನಡ ಪ್ರೇಮಕ್ಕೆ ಹೊಯ್‌ಕಯ್ಯಾಗಿ ನಿಲ್ಲುವಂಥದು ಅವರ ಒಡೆಯರ ಪ್ರೇಮ. ಹೊಗಳಿಕೆಯ/ ಭಕ್ತಿಯ ಮಹಾಪೂರವೇ ಇಲ್ಲಿ ಹರಿದಿದೆ. ಶ್ರೀಯವರಿಗೆ ಆಗ ಆಳುತ್ತಿದ್ದ ನಾಲ್ವಡಿ ಕೃಷ್ಣರಾಜರೆಂದರೆ ಬಹಳ ಪ್ರೇಮ; ಎಲ್ಲಿಲ್ಲದ ಗೌರವ. ಮೈಸೂರೆಂದರೆ ನಾಲ್ವಡಿ ಕೃಷ್ಣರಾಜರೆಂದೇ ಅವರ ಅಭಿಪ್ರಾಯ; ನಿಲುವು. ಆ ಕಾರಣವಾಗಿ ಅವರು ನಾಲ್ವಡಿಯವರನ್ನು ಕುರಿತು 'ಪ್ರಗಾಥ'ಗಳನ್ನೇ ಬರೆದಿದ್ದಾರೆ. 'ಮೈಸೂರು ಮಕ್ಕಳು' ಪದ್ಯದಿಂದ ಒಂದು ಉದಾಹರಣೆ :

**ಚಿನ್ನದ ನಾಡದು,**

**ಮೈಸೂರು**

**ಗಂಧದ ಗುಡಿಯದು,**

**ಮೈಸೂರು**

**ವೀಣೆ ಬೆಡಗದು,**

**ಮೈಸೂರು**

**ನಾಲುಮಡಿ ಕೃಷ್ಣನ**

**ಮೈಸೂರು.**

ಹೀಗೆ ಒಡೆಯರ ಬಗ್ಗೆ ಬರೆಯುತ್ತಾರೆ; ಆರ್ಯ ರಾಜರ ಬಗ್ಗೆಬರೆಯುತ್ತಾರೆ; ಧರ್ಮದ ಬಗ್ಗೆ ಬರೆಯುತ್ತಾರೆ. ಗತ ಇತಿಹಾಸದ ಬಗ್ಗೆ ಮಾತಾಡುತ್ತಾರೆ; ಈಗ ಸೊರಗಿದೆ ಎಂಬ ರೀತಿಯಲ್ಲಿ ಅಭಿಪ್ರಾಯಪಡುತ್ತಾರೆ. ಕನ್ನಡ ನಾಡಿನ ಜನರನ್ನು ಎಚ್ಚರಿಸುವ ಸಲುವಾಗಿ ಇದು ಕೋರಿಕೆ ಅಥವಾ ವರ್ಣನೆಯ ಭಾಷಣರೂಪ ಪಡೆಯುತ್ತದೆ. ಆದರೆ ಸ್ವಾತಂತ್ರ್ಯದ ಬಗ್ಗೆ, ಗಾಂಧೀಜಿಯ ಬಗ್ಗೆ ಅವರು ಬರೆಯಲಿಲ್ಲವೇಕೆ? 'ಭರತಮಾತೆಯ ನುಡಿ' ಎಂಬ ಚೆನ್ನಾದ ಕವಿತೆಯಲ್ಲಿ 'ಭರತ ಮಾತೆಯೆ, ಭರತಮಾತೆಯೆ ಎಂದು ನೀ ತಲೆಯೆತ್ತುವೆ'. "ನಮ್ಮ ಮನೆಯಲಿ ನಾವು ಹೆರರಿಗೆ ದುಡಿವ ತೊತ್ತುಗಳಾದೆವು" ಎಂದೇನೋ ಹೇಳುತ್ತಾರೆ. ಈ ಎರಡು ವಾಕ್ಯಗಳನ್ನು ಬಿಟ್ಟರೆ ಆ ಬಗೆಗೆ ಹೆಚ್ಚಿನ ಪ್ರಸ್ತಾಪವೇನೂ ಇಲ್ಲ. ಆಗ ದೊರೆಗಳು ಆಳುತ್ತಿದ್ದುದರಿಂದ ತಾವು ಸ್ವಾತಂತ್ರ್ಯದ ಬಗ್ಗೆ ಬರೆದರೆ ಅವರನ್ನು ವಿರೋಧಿಸಿದಂತಾಗುತ್ತದೆ ಎಂಬ ಭಾವನೆ ಅವರಿಗೆ ಬಂದಿರಬಹುದೆ? ಆದರೂ ಸಮಗ್ರ ಭರತಖಂಡವೇ ಗಾಂಧೀಜಿಯ ನೇತೃತ್ವದಲ್ಲಿ ಹೋರಾಡುತ್ತಿದ್ದರೆ, ಸಮಕಾಲೀನ ಕವಿಯೊಬ್ಬ ಮೌನ ವಹಿಸುವುದು ಸರಿಯಲ್ಲವೆಂದೇ ತೋರುವುದು.

(ಮುಂದುವರೆಯುವುದು)

## ಸಂಶೋಧನಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ನಮ್ಮ ಮಾನ್ಯತಾ ಕೇಂದ್ರದ ಸಂಶೋಧನಾ ವಿದ್ಯಾರ್ಥಿಗಳ ಮಾರ್ಗದರ್ಶನ ಮಾಡಲು ಹೊಸದಾಗಿ

**೧. ಡಾ.ಪುಷ್ಪಭಾರತಿ ಆರ್.ಎ.**

**೨. ಡಾ.ವೆಂಕಟೇಶಯ್ಯ ಕೆ.ಎಮ್.**

ಇವರನ್ನು ೨೦೨೨–೨೩ನೇ ಸಾಲಿನಿಂದ ಪೂರ್ವಾನ್ವಯವಾಗುವಂತೆ ಮಾರ್ಗದರ್ಶಕರನ್ನಾಗಿ ನಿಯೋಜಿಸಲಾಗಿದೆ.



**Printed & Published by :** B.R. Ravindranath on behalf of the BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 and printed by Keerthi Printers, Girinagar, Bengaluru - 560085 & published at BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭